

ಪೈಪ್‌ನಲ್ಲಿ ಅಡುಗೆ ಅನಿಲ ಪೂರೈಕೆ

ಶತಮಾನಗಳ ಕಾಲ ಮಾನವನ 'ಅಭಿವೃದ್ಧಿ ಚಟುವಟಿಕೆ'ಗೆ ಇಂಧನವಾಗಿದ್ದ ಪೆಟ್ರೋಲಿಯಂ ತೈಲಪಾತ್ರೆ ಬರಿದಾಗುತ್ತಿದೆ. ಈ ತೈಲವನ್ನೇ ನೆಚ್ಚಿಕೊಂಡು ನಡೆಯುತ್ತಿದ್ದ ಚಟುವಟಿಕೆಗಳ ಗತಿ ಏನು? ಎಂಬ ಬೃಹತ್ ಪ್ರಶ್ನೆಯೊಂದು ಈಗ ಜಗತ್ತಿನೆದುರು ಬಾಯ್ತೆರೆದು ನಿಂತಿದೆ. ಈ ಪ್ರಶ್ನೆಯೇ ಇದೀಗ ಪರ್ಯಾಯ ಇಂಧನಗಳ ಹುಡುಕಾಟಕ್ಕೆ ಪ್ರೇರಣೆ ಒದಗಿಸಿದೆ. ಮನುಷ್ಯನ ಜೀವನಶೈಲಿಯನ್ನೇ ಬದಲಾಯಿಸಿದ್ದ ಅಭಿವೃದ್ಧಿಯ ನಾಗಾಲೋಟ, ಈಗ ನವನವೀನ ಪರ್ಯಾಯ ಇಂಧನಗಳ ಶೋಧಗಳಿಂದಾಗಿ ಮಗ್ಗಲು ಬದಲಾಯಿಸಲು ಸಜ್ಜಾಗಿದೆ.

ಇದು ಹೊಸ ಬದಲಾವಣೆಗಳಿಗೆ ಒಗ್ಗಿಕೊಳ್ಳುವ ಕಾಲಘಟ್ಟ. ಹೊಸ ಹೊಸ ಬಗೆಯ ಇಂಧನ ಬಳಕೆಯನ್ನು ಸ್ವಾಗತಿಸಲು ನಾವೆಲ್ಲರೂ ಅಣಿಯಾಗಬೇಕಿದೆ.

ಮನೆ ಮನೆಗಳಲ್ಲಿ ವಿದ್ಯುತ್ ಬಳಕೆ ಹೆಚ್ಚಾಗಿದೆ. ಅಡುಗೆ ಅನಿಲದ ಬಳಕೆ ಅನಿವಾರ್ಯವಾಗಿದೆ. ಒಂದೇ ಮನೆಯಲ್ಲಿ ಏನಿಲ್ಲವೆಂದರೂ 2–3 ವಾಹನಗಳು ಸಾಮಾನ್ಯ ಎನ್ನುವಂತಾಗಿದೆ. ಇಂಧನ ಬಳಕೆಗೆ ನೂರೆಂಟು ದಾರಿ. ಹಾಗೆಯೇ ಪರ್ಯಾಯ ಇಂಧನಗಳದ್ದೂ ಈಗ ಹತ್ತಾರು ದಾರಿ. ಇಲ್ಲಿದೆ ಈ ಪರ್ಯಾಯ ದಾರಿಗಳತ್ತ ಒಂದು ಇಣುಕುನೋಟ.

## 1. ಪೈಪ್‌ನಲ್ಲಿ ಬಂತು ಅಡುಗೆ ಅನಿಲ

ಇನ್ನು ಮುಂದೆ ಬೆಂಗಳೂರಿನ ಮಹಿಳೆಯರು 'ಅಡುಗೆ ಅನಿಲ ಖಾಲಿಯಾಯಿತು, ಅಡುಗೆ ಮಾಡುವುದು ಹೇಗೆ' ಎಂದು ಚಿಂತಿಸುವ ಅಗತ್ಯ ಇಲ್ಲ. ನಲ್ಲಿ ನೀರಿನಂತೆ ಟ್ಯಾಪ್ ತಿರುಗಿಸಿದರೆ ಅಡುಗೆ ಅನಿಲ ಬರುತ್ತದೆ. ಯಾವ ಆತಂಕವೂ ಇಲ್ಲದೆ ಅಡುಗೆ ರೆಡಿ ಮಾಡಬಹುದು. ಪೈಪ್‌ಲೈನ್ ಮೂಲಕ ಅಡುಗೆ ಮನೆಗೆ ಅನಿಲ (ಪಿಎನ್‌ಜಿ) ಸಂಪರ್ಕ ಪಡೆಯುವ ಕಾಲ ಕೂಡಿಬಂದಿದೆ. ಇದರಿಂದಾಗಿ ನಗರದ ನಿವಾಸಿಗಳಿಗೆ ಸಿಲಿಂಡರ್ ಬದಲಾಯಿಸುವ ಕಿರಿಕಿರಿಯಿಂದ ಮುಕ್ತಿ ಸಿಗಲಾರಂಭಿಸಿದೆ. ಸಬ್ಸಿಡಿ ದರದಲ್ಲಿ ಸಿಗುವ ಎಲ್‌ಪಿಜಿಗೆ ಹೋಲಿಸಿದರೆ ಇವುಗಳ ಬಳಕೆಯಿಂದ ಶೇಕಡಾ 15ರಷ್ಟು ಹಣದ ಉಳಿತಾಯವೂ ಆಗುತ್ತದೆ.

ಜನರು ಕುಡಿಯುವ ನೀರು ಹಾಗೂ ಕರೆಂಟ್ ಬಿಲ್‌ನಂತೆ ಎರಡು ತಿಂಗಳಿಗೊಮ್ಮೆ ಇದರ ಬಿಲ್ ಪಾವತಿಸಬಹುದು. ಗೃಹ ಬಳಕೆಯ ಸಂಪರ್ಕಕ್ಕಾಗಿ ₹ 5,800 ಪಾವತಿಸಬೇಕಾಗುತ್ತದೆ. ಇದರಲ್ಲಿ ₹ 5,000 ಮೊತ್ತವನ್ನು ಭದ್ರತಾ ಠೇವಣಿಯಾಗಿ, ₹ 300 ಮೊತ್ತವನ್ನು ಠೇವಣಿಯಾಗಿ ಪಡೆಯಲಾಗುತ್ತದೆ. ₹ 500 ಅನ್ನು ಹೊಂದಾಣಿಕೆ ರೂಪದಲ್ಲಿ ಭದ್ರತಾ ಠೇವಣಿಯಾಗಿ ಸ್ವೀಕರಿಸಲಾಗುತ್ತದೆ.

ಅನಿಲ ಸಿಲಿಂಡರ್ ಮುಗಿದಾಗ ಎಷ್ಟೋ ಕಡೆ ತಕ್ಷಣ ಇನ್ನೊಂದು ಸಿಗುವುದಿಲ್ಲ. ನಗರದ ಪುರುಸೊತ್ತೇ ಇಲ್ಲದ ಬದುಕಿನಲ್ಲಿ ಗ್ಯಾಸ್ ಏಜೆನ್ಸಿ ಕಡೆಗೇ ಹೋಗಿ ನಾವೇ ಸಿಲಿಂಡರ್ ತರುವುದೂ ಕಷ್ಟದ ಕೆಲಸವೇ. ಅಡುಗೆ ಮನೆಗೇ ನೇರವಾಗಿ ಪೈಪ್ ಮೂಲಕ ಅನಿಲ ಬಂದರೆ ಅತ್ಯಂತ ಹೆಚ್ಚು ಖುಷಿ ಪಡುವವರು ಮಹಿಳೆಯರು. ಬೆಂಗಳೂರಿನ ಪ್ರಯೋಗ ಶೀಘ್ರದಲ್ಲೇ ರಾಜ್ಯದ ಇತರ ಜಿಲ್ಲೆಗಳಲ್ಲೂ ಕಾರ್ಯರೂಪಕ್ಕೆ ಬರಲಿದೆ.

### ಪಿಎನ್‌ಜಿ-ಸಿಎನ್‌ಜಿ ಹಾದಿ

ದಾಬೋಲ್–– ಬೆಂಗಳೂರು ಅನಿಲ ಕೊಳವೆ ಮಾರ್ಗದ ಮೂಲಕ ರಾಜ್ಯಕ್ಕೆ ಅನಿಲ ಸರಬರಾಜು ಯೋಜನೆ 2013ರಲ್ಲಿ ಆರಂಭಗೊಂಡಿತು. ಈ ಯೋಜನೆ ಜಾರಿಗೆ ರಾಜ್ಯ ಸರ್ಕಾರ ಹಾಗೂ ಭಾರತೀಯ ಅನಿಲ ಪ್ರಾಧಿಕಾರ (ಗೇಲ್) 2010ರ ಮೇ 10ರಂದು ಒಡಂಬಡಿಕೆಗೆ ಸಹಿ ಹಾಕಿದ್ದವು. ರಾಜ್ಯದ 700 ಕಿ.ಮೀ, ಮಹಾರಾಷ್ಟ್ರ 263 ಕಿ.ಮೀ ಹಾಗೂ ಗೋವಾದ 36 ಕಿ.ಮೀ ಪ್ರದೇಶ ಸೇರಿದಂತೆ ಈ ಯೋಜನೆಯ ಕೊಳವೆ ಮಾರ್ಗಗಳು 1,000 ಕಿ.ಮೀ. ಪ್ರದೇಶದಲ್ಲಿ ಹಾದು ಹೋಗಿವೆ.

ರಾಜ್ಯದ ಬೆಳಗಾವಿ, ಧಾರವಾಡ, ಗದಗ, ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ತುಮಕೂರು, ರಾಮನಗರ, ಬೆಂಗಳೂರು ಗ್ರಾಮಾಂತರ ಹಾಗೂ ಬೆಂಗಳೂರು ನಗರ ಜಿಲ್ಲೆಗಳಲ್ಲಿ ಕೊಳವೆ ಮಾರ್ಗ ಹಾದು ಬಂದಿದೆ. ಈ ರವಾನೆ ಜಾಲವು ದಿನಕ್ಕೆ 16 ಎಂಎಂಎಸ್‌ಸಿಎಂಡಿ (ದಶಲಕ್ಷ ಮೆಟ್ರಿಕ್